(7) ಗಮನ ಸೆಳೆಯುವ ಸೂಚನೆ

ವಿಷಯ : ರಾಜ್ಯ ಸರ್ಕಾರಿ ವೈದ್ಯಕೀಯ ವಿದ್ಯಾಲಯಗಳಲ್ಲಿ ಎಂಬಿಬಿಎಸ್, ಎಂಡಿ ಹಾಗೂ ಎಂಎಸ್ ವಿದ್ಯಾರ್ಥಿಗಳಿಗೆ ಬೋಧಿಸಲು ಕೇವಲ ಎಂಬಿಬಿಎಸ್ ತೇರ್ಗಡೆಯಾಗಿರುವವರನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಮಾಡುತ್ತಿರುವ ಬಗ್ಗೆ.

+ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರಿ ವೈದ್ಯಕೀಯ ವಿದ್ಯಾಲಯಗಳಲ್ಲಿ ಎಂಬಿಬಿಎಸ್, ಎಂಡಿ ಹಾಗೂ ಎಂಎಸ್ ವಿದ್ಯಾರ್ಥಿಗಳಿಗೆ ಬೋಧಿಸಲು ಕೇವಲ ಎಂಬಿಬಿಎಸ್ ತೇರ್ಗಡೆಯಾಗಿರುವವರನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಮಾಡುತ್ತಿರುವ ಬಗ್ಗೆ ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀಮತಿ ನಫೀಸಾ ಫಜಲ್(ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ 1982ರಿಂದ ಖಾಲಿ ಇದ್ದ ಲೆಕ್ಚರರ್ಸ್ ಹುದ್ದೆಗಳನ್ನು ಕೇಡರ್ ಆಂಡ್ ರೆಕ್ರೂಟ್‌ಮೆಂಟ್ ನಿಯಮದ ಪ್ರಕಾರ ತುಂಬಲು ಕೆ.ಪಿ.ಎಸ್.ಸಿ.ಗೆ ಸೂಚಿಸಲಾಗಿದ್ದು, ಆದರ ಪ್ರಕಾರ ಈ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಎಂ.ಸಿ.ಐ. ನಾರ್ಮ್ಸ್ ಪ್ರಕಾರ ಈಹುದ್ದೆಗಳನ್ನು ಭರ್ತಿ ಮಾಡಿಕೊಳ್ಳದಿದ್ದರೆ ವೈದ್ಯಕೀಯ ಕಾಲೇಜುಗಳ ಪ್ರವೇಶ ಮಿತಿಯು ಕಡಿತವಾಗುವುದರಿಂದ ಈಹುದ್ದೆಗಳನ್ನು ಭರ್ತಿಮಾಡಲು ಕ್ರಮ ಕೈಗೊಳ್ಳಲಾಗಿದೆ. ಎಂ.ಸಿ.ಐ ನಾರ್ಮ್ಸ್ ಪ್ರಕಾರ, ಸಿ.ಅಂಡ್ ಆರ್. ನಿಯಮಕ್ಕೆ ಸೂಕ್ತ ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

+ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಮುಖವಾದಂತಹ ಅಂಶ ಆಗಿರುವುದರಿಂದ ನಾನು ನಿಯಮ 69ರಡಿ ಇದರ ಬಗ್ಗೆ ನೋಟೀಸ್ ನೀಡಿದ್ದೆ. 20 ವರ್ಷಗಳ ನಂತರ 133 ಜನರನ್ನು ವೈದ್ಯಕೀಯ ಕಾಲೇಜುಗಳಲ್ಲಿ ಲೆಕ್ಚರರ್ಸ್ ಆಗಿ ನೇಮಕ ಮಾಡಲಿಕ್ಕೆ ಈ ಸರ್ಕಾರ ಆದೇಶವನ್ನು ಕೊಟ್ಟಿದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಧನ್ಯವಾದಗಳನ್ನರ್ಪಿಸುತ್ತೇನೆ. ಎಂಡಿ ಮತ್ತು ಎಂಎಸ್ ವಿದ್ಯಾರ್ಥಿಗಳಿಗೆ ಪಾಠ ಮಾಡಲು ಎಂಬಿಬಿಎಸ್ ಆದವರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಆಂದರೆ ಇದು ಒಂದು ರೀತಿಯಲ್ಲಿ ಎಂಎಸ್‌ಸಿ, ಎಂಎ ಮತ್ತು ಪಿ.ಹೆಚ್.ಡಿ. ಯವರಿಗೆ ಬಿಎ, ಬಿಎಸ್‌ಸಿ ವಿದ್ಯಾರ್ಹತೆ ಹೊಂದಿರುವರಿಂದ ಪಾಠ ಮಾಡಿಸುವಂತೆ ಇದೆ. ಈ ವ್ಯವಸ್ಥೆ ಈ ಸರ್ಕಾರದಿಂದ ಪ್ರಾರಂಭವಾಗಿದೆ. ಎಂಸಿಐ ನಾರ್ಮ್ಸ್ ಪ್ರಕಾರ ಸಿ ಅಂಡ್ ಆರ್ ರೂಲ್ಸ್ ನಿಯಮಗಳಡಿಯಲ್ಲಿ ಈ ನೇಮಕಾತಿಯನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. 133 ಜನ ನೇಮಕಾತಿಯ ಪತ್ರಗಳು ಇಲ್ಲಿವೆ. ಇಲ್ಲಿ ನೇಮಕಗೊಳ್ಳಲು ಆಯ್ಕೆಯಾಗಿರುವ ಎಸ್‌ಸಿ ಎಸ್‌ಟಿ ಅಭ್ಯರ್ಥಿಗಳೆಲ್ಲರೂ ಕೂಡ ಎಂಡಿ, ಎಂಎಸ್ ಪಾಸ್ ಮಾಡಿದ್ದಾರೆ. ಆದರೆ ಬಿಎಂಅಡಿಯಲ್ಲಿ ಆಯ್ಕೆಯಾಗಿರುವವರಲ್ಲಿ 133ರಲ್ಲಿ 55 ಜನ ಕೇವಲ ಎಂಬಿಬಿಎಸ್ ಪಾಸ್ ಮಾಡಿದ್ದಾರೆ. ಅವರನ್ನು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪಾಠ ಮಾಡಲು ನೇಮಕ ಮಾಡಿಕೊಳ್ಳಲಾಗುತ್ತಿದೆ. ಈ ಬಗ್ಗೆ ಸಂಬಂಧಿಸಿದ ಕಡತ ಮಾನ್ಯ ಮುಖ್ಯಮಂತ್ರಿಗಳ ಸಹಿಗಾಗಿ ಬಂದಿದೆ ಎಂದು ನಮಗೆ ತಿಳಿದು ಬಂದಿದೆ. ಆಂದರೆ ಇವತ್ತು ಸರ್ಕಾರ ಯಾವ ಹಾದಿಯಲ್ಲಿ ಹೋಗುತ್ತಿದೆ? ಸಿ ಅಂಡ್ ಆರ್ ನಿಮಗೆ ಏನು ಹೇಳುತ್ತದೆ? ಎಂಸಿಐ ರೂಲ್ ನಿಮಗೆ ಏನು ಹೇಳುತ್ತದೆ ? ಜೊತೆಗೆ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ಅನ್ನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಕಳೆದ ವರ್ಷ ಸುಪ್ರೀಂ ಕೋರ್ಟಿನಲ್ಲಿ ಕರ್ನಾಟಕ ಸರ್ಕಾರದ ವಿರುದ್ಧ ಒಂದು ಜಡ್ಜ್‌ಮೆಂಟ್ ಆಗಿದೆ. ಅದರಲ್ಲಿ ಎಂಸಿಐ ಆ್ಯಕ್ಟ್ ಪ್ರಕಾರ ಸೆಕ್ಷನ್ 10ಎ, 10ಬಿ, 10ಸಿ ಮತ್ತು 33 ಕೆಂಪಲ್ಸರಿಯಾಗಿದ್ದು, ಅದರ ಪ್ರಕಾರವೇ ನೇಮಕ

ಮಾಡಬೇಕು ಎಂದು ಹೇಳಿದೆ ಆದರೆ ಇದನ್ನು ಪಯೆಲೇಟ್ ಮಾಡಿ ನೇಮಕ ಮಾಡುವಂಥ ವ್ಯವಸ್ಥೆ ಆಗಿದೆ. ಇದಕ್ಕೆ ಸಂಬಂಧಪಟ್ಟಹಾಗೆ ನಾನು ಏನಾದರೂ ವಿಚಾರಗಳನ್ನು ಹೇಳಿದರೆ. ಯಾರ್ಯಾರ ಸಂಬಂಧಿಗಳು ಎನ್ನುವುದನ್ನು ಹೇಳಿದರೆ, ತಾವು ಅದನ್ನು ಸೆಕ್ಷನ್ ಪ್ರಕಾರ ಇಲ್ಲಿ ತರಬೇಕು ಎಂದು ಹೇಳುತ್ತೀರಿ ಆದ್ದರಿಂದ ನಾನು ಏನು ಹೇಳಲು ಹೋಗುವುದಿಲ್ಲ. ಬಹಳ ಪ್ರಾಮಾಣಿಕವಾದಂಥ ರೀತಿಯಲ್ಲಿ ನೇಮಕ ಆಗಿದೆ. ಬಹಳ ಇನ್‌ಷ್ಟ್ಯೂಯೆನೆಷಿಯಲ್ ಆಗಿದ್ದಂಥ 55 ಜನಗಳಿಗೆ ಒಂದು ಸೀಟನ್ನು ಕೊನೆಯ ಪಕ್ಷ 10 ಲಕ್ಷ ರೂಪಾಯಿಗಳಿಂದ 8 ಲಕ್ಷ ರೂಪಾಯಿಗಳವರೆಗೆ ಮಾರಾಟ ಮಾಡಿದ್ದಾರೆ. ಆರ್ಥೋಪೆಡಿಕ್ಸ್ ಅಂಥಾದ್ದಕ್ಕೆ 10 ಲಕ್ಷ ರೂಪಾಯಿಗಳು. ಈ ರೀತಿಯಲ್ಲಿ 55 ಸೀಟುಗಳ ಮಾರಾಟವನ್ನು ಸುಮಾರು 5 ಕೋಟಿ ರೂಪಾಯಿಗಳಿಗೆ ಮಾಡಿರುವಂಥ ವ್ಯವಸ್ಥೆ ಆಗಿದೆ. ಹೀಗೆ ಮಾಡಿರುವಂಥದ್ದು ಸರಿಯೇ ಎನ್ನುವ ವಿಚಾರವನ್ನು ನಾನು ಪ್ರಮುಖವಾಗಿ ಸರ್ಕಾರದ ಗಮನಕ್ಕೆ ತರುತ್ತೇನೆ. ಅದನ್ನು ಎಂ.ಸಿ.ಐ.ನವರು ಅಪ್ರೂವ್ ಮಾಡುವ ಸಾಧ್ಯತೆಗಳಿವೆಯೇ? ಕೇಂದ್ರ ಸರ್ಕಾರದ ಮತ್ತು ಎಂಸಿಐ ರೂಲ್ಸ್‌ಗಳ ವಿರುದ್ಧವಾಗಿ ಮಾಡಿರುವುದರ ಬಗ್ಗೆ, ಇಂಥ ಅಕ್ರಮದ ಬಗ್ಗೆ ತಾವು ತನಿಖೆಯನ್ನು ಮಾಡಿದ ನಂತರವೇ ಸಂಬಂಧಪಟ್ಟಂಥದ್ದಕ್ಕೆ ಅಫ್ಲೆಯನ್ನು ಕಳಿಸಬೇಕು ಎಂದು ನಾನು ತಮ್ಮ ಮೂಲಕ ಮಂತ್ರಿಗಳನ್ನು ಕೇಳಲು ಇಚ್ಛೆಪಡುತ್ತೇನೆ.

ಶ್ರೀಮತಿ ನಫೀಸ್ ಫಜಲ್ : ಮಾನ್ಯ ಅಧ್ಯಕ್ಷರೇ, ಕೇಡರ್ ಅಂಡ್ ರೆಕ್ರ್ಯೂಟ್‌ಮೆಂಟ್ ರೂಲ್ಸ್ ಪ್ರಕಾರ ಲೆಕ್ಚರರ್ಸ್ ಹುದ್ದೆಗೆ ಎಂ.ಬಿ.ಬಿ.ಎಸ್ ಆಗಿದ್ದಂಥವರನ್ನು ನೇಮಿಸಬಹುದು. According to the cadre & recruitment Rules those who have passed M.B.B.S. are eligible to become Lecturers. But, M.C.I. norms are different. According to the M.C.I. norms as Mr. Ramdas said only post-graduates can be accommodated as Lecturers are Assistant Professors. ಇದರ ಪ್ರಕಾರ ಕೇಡರ್ ಅಂಡ್ ರೆಕ್ರುಟ್‌ಮೆಂಟ್ ನಿಯಮಗಳನ್ನು ತಿದ್ದುಪಡಿ ಮಾಡಲಾಗುವುದು. 1982ರಿಂದ ರೆಕ್ರುಟ್‌ಮೆಂಟ್ ಆಗಿರಲಿಲ್ಲ. ಲೆಕ್ಚರರ್ಸ್ ಅನ್ನು ಕೂಡಲೇ ಭರ್ತಿ ಮಾಡುವ ಅವಶ್ಯಕತೆ ಇತ್ತು. ನಮ್ಮ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ಮುಂಚೆಯೇ ಈ ಪ್ರೊಸೆಸ್ ಆರಂಭವಾಗಿತ್ತು ರಾಮದಾಸ್ ರವರು ಹೇಳಿದ ಪ್ರಕಾರ 133 ಹುದ್ದೆಗಳನ್ನು ಭರ್ತಿ ಮಾಡಲು ಅಭ್ಯರ್ಥಿಗಳನ್ನು ಕೆ.ಪಿ.ಎಸ್.ಸಿಯವರು ಆಯ್ಕೆ ಮಾಡಿದ್ದಾರೆ. ಆ ಪಟ್ಟಿಯ ಪ್ರಕಾರ ನೇಮಕಾತಿ ಮಾಡಲು ಕ್ರಮ ತೆಗೆದುಕೊಳ್ಳುತ್ತಿದ್ದೇವೆ ಮಾನ್ಯ ಅಧ್ಯಕ್ಷರೇ ನಾನು ಇನ್ನೂ ವಿವರಣೆ ನೀಡಬೇಕು. ನನಗೆ ಇಂಗ್ಲೀಷನಲ್ಲಿ ಮಾತನಾಡಲು ಅನುಮತಿ ಕೊಟ್ಟಿರುವುದರಿಂದ ಇಂಗ್ಲೀಷ್‌ನಲ್ಲಿ ಹೇಳಲು ಇಚ್ಛೆಪಡುತ್ತಿದ್ದೇನೆ. According to the M.C.I. norms we should also have Tutors in addition to Lecturers for which the basic qualification is M.B.B.S.In our medical colleges, we do not have the post of Tutors. This is one of the M.C.I. norms that Tutors are aslo required. M.C.I. norms were implemented by the Government of India in 1997. Steps are being taken to anend the Cadre & Recruitments Rules as per the M.C.I. norms. We are taking steps. Weare in the process already. In addition, we also have more than 200 P.G. Lecturers in our Governmet Colleges. The recruitment process started in 1999 ಅವರು ಹೇಳುತ್ತಾ ಇರುವುದು ನನಗೆ ಗೊತ್ತಿದೆ, ನನ್ನ ಅಭಿಪ್ರಾಯವೂ ನಿಮ್ಮ ಪ್ರಕಾರವೇ ಇದೆ. ನಾವು ಕ್ರಮ ತೆಗೆದುಕೊಂಡು ಇದನ್ನು ಸರಿ ಮಾಡುತ್ತೇವೆ.

+ಶ್ರೀ ಎಸ್.ಸುರೇಶ್‌ಕುಮಾರ್ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಚಿವರು ನಮ್ಮ ವಿಚಾರವನ್ನು ಕೂಡ ಒಪ್ಪಿಕೊಂಡು ಅಗತ್ಯ ತಿದ್ದುಪಡಿ ತರುತ್ತೇವೆ ಎಂದು ಹೇಳುತ್ತಿದ್ದಾರೆ . ಸಿ ಅಂಡ್ ಆರ್ ರೂಲ್ಸ್ ಅನ್ನು ನೆರವಿಗೆ ತೆಗೆದುಕೊಂಡು, ಅದರ ಪ್ರಕಾರ ಬೇಸಿಕ್ ಕ್ವಾಲಿಫಿಕೇಷನ್ ಎಂಬಿಬಿಎಸ್ ಅದಕ್ಕೋಸ್ಕರ ನಾವು ಎಂಬಿಬಿಎಸ್ ಅದಂಥವರನ್ನು ನೇಮಕ ಮಾಡಿದ್ದೇವೆ ಎಂದು ಹೇಳಿದ್ದಾರೆ. ಮುಖ್ಯಮಂತ್ರಿಗಳೂ ಸದನದಲ್ಲಿ ಹಾಜರಿರುವುದರಿಂದ ಹೇಳುತ್ತೇನೆ, ಕಾಮನ್‌ಸೆನ್ಸ್‌ನಲ್ಲಿ ನೋಡುವುದಾದರೆ, ಎಸ್‌ಎಸ್ ಎಲ್‌ಸಿ ಪಾಸ್ ಆದವರನ್ನು ನಾವು ಹೈಸ್ಕೂಲುಗಳಿಗೆ ಟೀಚರ್ ಮಾಡುವುದಿಲ್ಲ ಏಳನೇ ಕ್ಲಾಸ್ ಪಾಸ್ ಮಾಡಿದವರಿಗೆ ಹೈಯರ್ ಪ್ರೈಮರಿ ಸ್ಕೂಲ್ ಟೀಚರ್ ಎಂದು ಮಾಡುವುದಿಲ್ಲ. ಎಂಸಿಐ ನಾರ್ಮ್ಸ್ ಪ್ರಕಾರ ನೀವು ಲೆಕ್ಚರರ್‌ಗಳನ್ನು ತೆಗೆದುಕೊಳ್ಳದಿದ್ದರೆ ಇಷ್ಟು ಸೀಟುಗಳನ್ನು ಕಡಿತ ಮಾಡುತ್ತೇವೆ ಎಂದು ಅವರು ಹೇಳಿದ ತಕ್ಷಣ ನಾವು ನೇಮಕಾತಿಯನ್ನು ಶುರು ಮಾಡಿದ್ದೇವೆ. ಅದೇ ರೀತಿ ಎಂ.ಸಿ. ಐ ಪ್ರಕಾರ ಎಲ್ಲಾ ಅದೇ ರೀತಿ ಎಂಸಿಐ ಪ್ರಕಾರ ಎಲ್ಲಾ ಯೂನಿವರ್ಸಿಟಿಗಳಿಗೆ, ಎಲ್ಲಾ ಪಬ್ಲಿಕ್ ಸರ್ವೀಸ್ ಕಮೀಷನ್‌ಗಳಿಗೆ ಕಳುಹಿಸಿಕೊಟ್ಟಿರುವ ಡೈರೆಕ್ಷನ್ ಅನ್ನು ಕೂಡ ನಾವು ಫಾಲೋ ಮಾಡಬೇಕು. ಆದರ ಪ್ರಕಾರವೇ ಕರ್ನಾಟಕ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಒಂದು ಅಟಾನಮಸ್ ಬಾಡಿಯಾಗಿದೆ ಅವರು ದಿನಾಂಕ 25-3-2000ರಂದು ನೇಮಕಾತಿಗೆ ಅಡ್ವರ್ಟೈಸ್‌ಮೆಂಟ್ ಕರೆದಿದ್ದಾರೆ.Professor-Qualification: M.D., M.S. in the concerned subject, Assistant Professor- Qualification: M.D, M.S. in the concerned Subject, Lecturer -Qualification: M.D., M.S.in the concerned subject. Lastly, qualification and experience should be strictly as per M.C.I. recognition, ಎಂದು ನಮ್ಮದೇ ರಾಜ್ಯದಲ್ಲಿರುವ ಇನ್ನೊಂದು ಅಟಾನಮಸ್ ಬಾಡಿ ಹೀಗೆ ಅಡ್ವರ್ಟೈಸ್ ಮೆಂಟ್ ಕೊಟ್ಟು ಬಹಳ ಸ್ಟ್ರಿಕ್ಟ್ ಆಗಿ ಫಾಲೋ ಮಾಡುತ್ತಿರುವಾಗ ಈ ಕರ್ನಾಟಕ ಪಬ್ಲಿಕ್ ಸರ್ವೀಸ್ ಕಮೀಷನ್‌ಗೆ ಏನಾಗಿದೆ? ಇದು ಒಂದಾದ ಮೇಲೆ ಒಂದರಂತೆ ಇಂತಹುದೇ ಸಾಹಸ ಮಾಡಿಕೊಂಡು ಬರುತ್ತಿದ್ದು ಇದರಿಂದ ಜನಸಾಮಾನ್ಯರಿಗೆ ಕೆ.ಪಿ.ಎಸ್.ಸಿ. ಬಗ್ಗೆ ಇವತ್ತು ಯಾವುದೇ ವಿಶ್ವಾಸ ಉಳಿದಿಲ್ಲ. ರಾಮದಾಸ್ ಅವರು ಹೇಳಿದರು, ಅವರು ಅಮೌಂಟನ್ನು ಕೂಡ ಹೇಳಿದರು. ಹಾದಿಯಲ್ಲಿ ಬೀದಿಯಲ್ಲಿ ಈ ರೀತಿಯ ಜಗಜ್ಜನಿತವಾಗುವುದು ಇನ್ಸ್‌ಟಿಟ್ಯೂಷನ್ ದೃಷ್ಟಿಯಿಂದ ಒಳ್ಳೆಯದೇ? ಅದಕ್ಕೋಸ್ಕರ ನಾನು ತಮ್ಮ ಮುಖಾಂತರ ಮುಖ್ಯಮಂತ್ರಿಗಳನ್ನು ಕೇಳುವುದು ಏನೆಂದರೆ ದಯವಿಟ್ಟು ಎಂ.ಬಿ.ಬಿ.ಎಸ್ ಪಾಠ ಮಾಡುವುದಕ್ಕೋಸ್ಕರ ಎಂ.ಬಿ.ಬಿ.ಎಸ್ ಅದವರನ್ನು ಅಪಾಯಿಂಟ್ ಮಾಡುವುದನ್ನು ನಿಲ್ಲಿಸಿ, ಎಂ.ಎಸ್.ಎಂ.ಡಿ. ಕ್ವಾಲಿಫಿಕೇಷನ್ ಆದಂಥವರನ್ನು ಮಾಡಿ ರಾಜ್ಯದ ಹಿತದೃಷ್ಟಿಯಿಂದ ಕಾ ಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಮುಂದೆ ಬರುವ ಡಾಕ್ಟರ್‌ಗಳ ಹಿತದೃಷ್ಟಿಯಿಂದ ನೇಮಕಾತಿ ರೂಲ್ಸ್‌ಅನ್ನು ಫಾಲೋ ಮಾಡ ಬೇಕು, ಎಂ.ಸಿ.ಐ. ಕೊಟ್ಟಿರುವ ಡೈರೆಕ್ಷನ್ ಅನ್ನು ಫಾಲೋ ಮಾಡಬೇಕು ಎಂದು ನಾನು ಕೂಡ ವರ ಜೊತೆಯಲ್ಲಿ ನನ್ನ ಧ್ವನಿಯನ್ನು ಸೇರಿಸುತ್ತಿದ್ದೇನೆ.

ಡಾ॥ ಎ.ಬಿ. ಮಲಕರೆಡ್ಡಿ :ಈಗಾಗಲೇ ಪ್ರೋಸೆಸ್ ಪ್ರಾರಂಭವಾಗಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಂ.ಡಿ. ಎಂ.ಎಸ್ ಆದಂಥ ಕೆಲವು ಹುಡುಗರು ನನ್ನ ಬಳಿ ಬಂದು, ಎಂ.ಬಿ.ಬಿ.ಎಸ್. ಆ ದಂಥವರಿಗೆ ಹೆಚ್ಚು ಮಾರ್ಕ್ಸ್ ಕೊಟ್ಟು ಅವರನ್ನು ಸೆಲೆಕ್ಟ್ ಮಾಡಿದ್ದಾರೆ, ನಮ್ಮ ಗತಿ ಏನು ಎಂದು ಕೇಳಿದರು. ನಾನು ಅಕ್ಟೋಬರ್ ತಿಂಗಳಿನಲ್ಲೇ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಮಾತನಾಡಿದ್ದೇನೆ. ಪ್ರೋಸೆಸ್

ನಡೆಯುತ್ತಿದೆ. ಮೊದಲು ಎಂ.ಸಿ.ಐ. ರೂಲ್ಸ್‌ನಲ್ಲಿ ಎಂ.ಬಿ.ಬಿ.ಎಸ್ ಎಂದು ಮಾತ್ರ ಇತ್ತು. But, they changed it. Cadre& Recruitment did not conform or it is not in conformity with the latest changed rules of the M.C.I ಅದು ಚೇಂಜ್ ಆಗಬೇಕಾದರೆ ಎಷ್ಟು ಸಮಯ ಬೇಕಾಗುತ್ತದೆ ಎಂದು ನಾನು ಕೇಳಿದೆ. ಸುಮಾರು 6-7 ತಿಂಗಳು ಬೇಕಾಗುತ್ತದೆ ಎಂದು ಅವರು ಹೇಳಿದರು. ನೋಟಿಫಿಕೇಷನ್ ಆದದ್ದು 1998ರಲ್ಲಿ. ಇಂಟರ್‌ವ್ಯೂ ಪ್ರಾರಂಭವಾದದ್ದು ಅಕ್ಟೋಬರ್ 4ನೇ ತಾರೀಖಿನಿಂದ, ಈ ರೀತಿ ಪ್ರೋಸಸ್ ನಡೆಯುತ್ತಿದೆ. ನಮ್ಮಲ್ಲಿ ಈಗಾಗಲೇ 358 ಲೆಕ್ಚರರ್ಸ್ ಇದ್ದಾರೆ. ಅವರಲ್ಲಿ 261 ಜನ ಪೋಸ್ಟ್ ಗ್ಯಾಜುಯೇಷನ್ ಆಗಿರುವಂಥ ಲೆಕ್ಚರರ್ಸ್ ಇದ್ದಾರೆ. ಕೇವಲ ಎಂ.ಬಿ.ಬಿ.ಎಸ್ ಅದಂಥವರಿಗೆ ಪೋಸ್ಟ್ ಗ್ಯಾಜುಯೇಷನ್ ಕ್ವಾಲಿಫಿಕೇಶನ್ ತೆಗೆದುಕೊಳ್ಳುವುದಕ್ಕೆ ತಕ್ಷಣ ಅರೇಂಜ್‌ಮೆಂಟ್ ಮಾಡುತ್ತೇವೆ. ಈ ರೀತಿ ಎಂ.ಬಿ.ಬಿ.ಎಸ್. ಆದಂಥವರು 97 ಜನ ಇದ್ದಾರೆ, immediately we will make an arrangement for post-graduate degree qualification.

ಅಧ್ಯಕ್ಷರು : ಈ ವಿಷಯ ಇಲ್ಲಿಗೆ ಮುಗಿಯಿತು.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ನಾನು ನಿಮ್ಮಲ್ಲಿ ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ, ಎಂ.ಡಿ. ಎಂ.ಸ್.ಗೆ ಹೋಗಬೇಕಾದರೆ ಮೆಡಿಕಲ್ ಕಾಲೇಜುಗಳಲ್ಲಿ 15-20 ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ ಇಲ್ಲಿ ಎಂ.ಬಿ.ಬಿ.ಎಸ್‌ನವರನ್ನು ನೇಮಕ ಮಾಡಿ ಸರ್ಕಾರ ಅವರಿಗೆ ಎ.ಸಿ.ಟಿ.ಐ. ಸಂಬಳ ಕೊಟ್ಟು, ಡಿಪ್ಯೂಟೇಷನ್ ಸ್ಯಾಲರಿ ಕೊಟ್ಟು, ಸರ್ಕಾರವೇ ಅವರನ್ನು ಎಂ.ಡಿ. ಎಂ.ಎಸ್‌ಗೆ ಏಕೆ ಕಳುಹಿಸಬೇಕು. ಎಂ.ಡಿ. ಎಂ.ಎಸ್ ಆಗಿರುವಂಥವರು ಇರಲಿಲ್ಲವೇ? ನನ್ನ ಹತ್ತಿರ ಇರುವ, ನಿಮ್ಮ ಪಟ್ಟಿಯ ಪ್ರಕಾರವೇ ಅರ್ಜಿ ಹಾಕಿದಂಥವರಲ್ಲಿ 73 ಜನ ಎಂ.ಡಿ. ಎಂ.ಎಸ್. ಪಾಸ್ ಮಾಡಿದಂಥ ಎಸ್.ಸಿ. ಎಸ್. ಟಿಯವರಿದ್ದಾರೆ. ಅವರನ್ನು ಏಕೆ ನೇಮಕ ಮಾಡಲಿಲ್ಲ ? ಬರೀ ಎಂ.ಬಿ.ಬಿ.ಎಸ್ ಆದವರನ್ನು ಏಕೆ ತೆಗೆದುಕೊಂಡಿದ್ದೀರಿ? ಕ್ಯಾಂಡಿಡೇಟ್‌ಗಳು ಇಲ್ಲದಿದ್ದರೆ, ಕ್ಯಾಂಡಿಡೇಟ್‌ಗಳು ಇರಲಿಲ್ಲ ಎಂದು ಹೇಳಬಹುದಿತ್ತು. ನಾನು ಏನಾದರೂ ಹೇಳಿದರೆ ನೀವು ಬೇಸರ ಮಾಡಿಕೊಳ್ಳುತ್ತೀರಿ, ಇಲ್ಲಿ ಕುಳಿತಿರುವಂಥ ಐ.ಪಿ.ಎಸ್. ಆಫೀಸರ್‌ಗಳ ಮಕ್ಕಳು ಅದರಲ್ಲಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ, ಆ ಕಡತ, ಪಟ್ಟಿತಮ್ಮಲ್ಲಿಗೆ ಬಂದಿದೆ, ಇದಕ್ಕೆ ಸಂಬಂಧಪಟ್ಟಹಾಗೆ ದಯವಿಟ್ಟು ಪರಾಮರ್ಶ ಮಾಡಿ ನಂತರದಲ್ಲೇ ತಾವು ಅದನ್ನು ಜಾರಿಗೆ ಕೊಡಬೇಕು ಎಂದು ಎಜುಕೇಷನ್‌ನ ಕ್ವಾಲಿಟಿ ದೃಷ್ಟಿಯಿಂದ,ಸಾರ್ವಜನಿಕರ ಹಿತದೃಷ್ಟಿಯಿಂದ ಕೇಳುತ್ತಿದ್ದೇನೆಯೇ ಹೊರತು ಸರ್ಕಾರದ ಮೇಲೆ ಏನೋ ಹಾಕುತ್ತಿದೇವೆ ಎನ್ನುವಂಥಾದ್ದಲ್ಲ. ಎರಡನೆಯದಾಗಿ, ಮಂತ್ರಿಗಳು ಹೇಳಿದರು, 1997ನೇ ಇಸವಿಯಲ್ಲೇ ಎಂ.ಸಿ.ಐ. ರೆಗ್ಯುಲೇಷನ್‌ಗೆ ಅಮೆಂಡ್‌ಮೆಂಟನ್ನು ತಂದು ಕೆ.ಪಿ.ಎಸ್.ಸಿ.ಗೆ ರಾಜ್ಯ ಸರ್ಕಾರಕ್ಕೆ ಮತ್ತು ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿದೆ. ಹೀಗೆ ಕಳುಹಿಸಿದ ಪತ್ರವೂ ನನ್ನ ಹತ್ತಿರ ಇದೆ. 1997ರಲ್ಲೇ ತಿಳಿಸಿದ್ದರೂ, ಈಗಲೂ ಏತಕ್ಕೋಸ್ಕರ ನೇಮಕ ಮಾಡುತ್ತಿದ್ದೀರಿ. ಏಕೆಂದರೆ, ಕೇವಲ ಎಂ.ಬಿ.ಬಿ.ಎಸ್. ಪಾಸ್ ಮಾಡಿದಂಥವರಿಗೆ ಮತ್ತು ಈ ಸದನದ ಒಳಗಡೆ ಇರುವಂಥ ರಿಲೇಷನ್‌ಗಳಿಗೆ ಕೊಡಬೇಕು ಎಂದೇ? ಇದು ಪಾರದರ್ಶಕವಾದಂಥ ಸರ್ಕಾರ. ಕೈಮುಗಿದು ಮತ್ತೊಮ್ಮೆ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ. ದಯವಿಟ್ಟು ಇದಕ್ಕೆ ತಡೆಯಾಜ್ಞೆ ನೀಡಬೇಕು ಎಂದು ಕೋರುತ್ತಿದ್ದೇನೆ.

ಶ್ರೀಮತಿ ನಫೀಸ್ ಫಜಲ್ : ನಾನು ವಿವರಣೆಯನ್ನು ಕೊಡುತ್ತೇನೆ. C&R Rules according to M.C.I norms were not conveyed. ಆ ಅಮೆಂಡ್‌ಮೆಂಟ್ ಇನ್ನೂ ಆಗಿಲ್ಲ, ನಾವು ಅದರ ಪ್ರೋಸೆಸ್‌ನಲ್ಲಿದ್ದೇವೆ. ಅದಕ್ಕೆ ಸ್ವಲ್ಪ ಸಮಯ ಆಗುತ್ತದೆ. ಮಾನ್ಯ ಆರೋಗ್ಯ ಮಂತ್ರಿಗಳೂ ಅದೇ ರೀತಿ ಹೇಳಿದ್ದಾರೆ. ನಾನು ಹೇಳಿದ್ದೇನೆ. ಇದು ನಮ್ಮ ಗಮನಕ್ಕೆ ಬಂದಿದೆ. Those who are recruited from the M.B.B.S. cadre will be taken as Tutors. According to the M.C.I.norms, the medical colleges need Tutors as well. They canbe taken in the capacity of Tutors, not as Lecturers. Your have got a point and we understand the point.

MR. SPEALER : Mr. Ramdas, no, it is sufficiently answered. I cannot allow.

11.40 ಪಿ.ಎಂ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ

ಅಧ್ಯಕ್ಷರು : ಸಾಕಷ್ಟು ಸಫಿಶಿಯೆಂಟ್ ಉತ್ತರವನ್ನು ಕೊಟ್ಟಿದ್ದಾರೆ. ರಾಮದಾಸ್ ಅವರೇ ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವದ ವಿಷಯವಾಗಿದೆ. ಈಗ ಅಮೆಂಡ್‌ಮೆಂಟ್ ಪ್ರೋಸೆಸ್‌ನಲ್ಲಿ ಇದೆ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರೆ, ಒಂದ್ನಿಮಿಷ ನಾನು ಹೇಳುವುದನ್ನು ಕೇಳಿ. ಗಮನಸೆಳೆಯು ಸೂಚನೆಯಲ್ಲಿ ಒಂದು ಅಥವಾ ಎರಡು ಕ್ಲಾರಿಫಿಕೇಷನ್ ಕೇಳಬಹುದು. ಐದು ಕ್ಲಾರಿಫಿಕೇಷನ್‌ನ್ನು ಒಬ್ಬರೇ ಕೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದು ಮಹತ್ವದ ವಿಚಾರ ಇರುವುದರಿಂದ ಕೇಳುತ್ತಿದ್ದೇವೆ. ಅಮೆಂಡ್‌ಮೆಂಟ್ ಪ್ರೋಸೆಸ್‌ನಲ್ಲಿ ಇದೆ ಎಂದು ಸಂಬಂಧಪಟ್ಟ ಸಚಿವರು ಹೇಳುತ್ತಿದ್ದಾರೆ. ಹಾಗಾದರೆ ಹಳೆಯ ರೂಲ್ಸ್ ಪ್ರಕಾರ ನೇಮಕ ಮಾಡಿಕೊಂಡಿಯವಂಥದ್ದು, ಇಲ್ಲೀಗಲ್ ಆಗಿರುವಂಥದ್ದು ಫೈಮಾ-ಫೈಸಿ ಆಗಿ ಕಾಣುತ್ತಾ ಇದೆ. ಈಗ ಆ ಲಿಸ್ಟ್ ಫೈನಲ್ ಆಗಿಬಿಟ್ಟಿದೆ. ಈಗ ಆ ಲಿಸ್ಟ್ ಮುಖ್ಯಮಂತ್ರಿಗಳ ಮುಂದಿದೆ. ಅದು ಫೈನಲ್ ಆಗಿ ಹೋಗುತ್ತದೆ. ಹಾಗಾದರೆ ಅಮೆಂಡ್‌ಮೆಂಟ್ ರೂಲ್ಸ್ ಪ್ರೋಸೆಸ್‌ನಲ್ಲಿ ಇದ್ದ ಸಮಯದೊಳಗೆ ಇಂಥ ಲಿಸ್ಟ್ ಮಾಡಿದರೆ ಹೇಗೆ?

ಶ್ರೀ ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, 261 ಜನ ಪೋಸ್ಟ್ ಗ್ರಾಜ್ಯುಯೆಟ್ಸ್ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎ. ರಾಮದಾಸ್: ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಬಹಳ ಪ್ರಾಮಾಣಿಕತೆಯಿಂದ ಕೇಳಿಕೊಳ್ಳುತ್ತಿದ್ದೇನೆ. ನಿನ್ನೆಯ ದಿವಸ ಅವರ ಹತ್ತಿರಕ್ಕೆ ಫೈಲು ಬಂದಿರುವುದರಿಂದ ಈ ಸರ್ಕಾರ ಪಾರದರ್ಶಕತೆಯಿಂದ ಕೆಲಸ ಮಾಡುತ್ತದೆ ಎನ್ನುವ ವಿಶ್ವಾಸ ಇವತ್ತಿಗೂ ಕೂಡ ನಮಗೆ ಇದೆ. ಆ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾಮಾಣಿಕವಾಗಿ ಹೇಳಿದ್ದೇನೆ. ಅವರೇನಾದರೂ ಕೂಡ ಹೇಳಿದರೆ

ಸಂಬಂಧಪಟ್ಟಂತಹವರು ಯಾರ್ಯಾರು ಎಷ್ಟೆಷ್ಟು ಹಣವನ್ನು ಕೊಟ್ಟಿದ್ದಾರೆ ಎನ್ನುವಂಥ ಪಟ್ಟಿಯನ್ನು ಅವರಿಗೆ ಕೊಡುತ್ತೇನೆ. ಅದರಲ್ಲಿ ಏನಾದರೂ ತಪ್ಪುಆಗಿದ್ದರೆ ನಾನು ಸದನದಿಂದ ಹೊರಕ್ಕೆ ಹೋಗುವುದಕ್ಕೆ ತಯಾರಾಗಿದ್ದೇನೆ.

ಅಧ್ಯಕ್ಷರು : ಇಲ್ಲಿ ಹಣದ ಪ್ರಶ್ನೆ ಉದ್ಭವಿಸುವುದಿಲ್ಲ. ಬೇರೆ ಕ್ಲಾರಿಫಿಕೇಶನ್‌ಗೆ ಅವಕಾಶ ಕೊಡುವುದಿಲ್ಲ. ನಾನು ನಿಮಗೆ 5 ಕ್ಕಿಂತ ಹೆಚ್ಚು ಸಲ ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟಂಥ ಕಡತವು ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳ ಬಳಿಗೆ ಬಂದಿರುವುದರಿಂದ ಮತ್ತು ಇದು ನಾಳೆಯಿಂದ ಚಾರಿಗೆ ಬರಬೇಕಾಗಿರುವುದರಿಂದ ಸಭಾನಾಯಕರಿಂದ ಇದರ ಬಗ್ಗೆ ನಾನು ಸ್ಪಷ್ಟನೆಯನ್ನು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀಮತಿ ಸಫೀಆ ಫಜಲ್ : ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ನಾವು ಎಂ.ಸಿ. ಐ. ರೂಲ್ಸ್ ಪ್ರಕಾರ ರಿಕ್ರೂಟ್‌ಮೆಂಟ್ ಮಾಡಲೇಬೇಕು. Otherwise, the intake of seats in the medical colleges comes down. It has already come down in Bangalore Medical College, Mysore Medical College, KIMS If we don't have the required amount of teaching staff, it will go down further. ಆದ್ದರಿಂದ ನಾವು ಇಷ್ಟು ರಿಕ್ರೂಟ್‌ಮೆಂಟ್ಸ್ ಮಾಡುತ್ತಾ ಇರುವುದು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಶ್ರೀ ರಾಮದಾಸ್ ಅವರು ಬಹಳ ಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇಂಥ ಪ್ರಾಮುಖ್ಯವಾದ ವಿಷಯಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಹೇಳಲಿಲ್ಲ, ತಾವು ದಯಮಾಡಿ ಅವರಿಗೆ ಹೇಳಬೇಕು.

MR.SPEAKER : I cannot compel the Minister to reply.

ಶ್ರೀ ಜಗದೀಶ್‌ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಸೀರಿಯಸ್ ಮ್ಯಾಟರ್ ಸಂಬಂಧಪಟ್ಟ ವಿಷಯವನ್ನು ಸದನದ ಗಮನಕ್ಕೆ ತಂದಾಗ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇದ್ದರೂ ಸಹ ಅದರ ಬಗ್ಗೆ ಉತ್ತರ ಹೇಳುತ್ತಿಲ್ಲ. ಸಂಬಂಧಪಟ್ಟ ಫೈಲು ಅವರ ಮುಂದೆ ಇದೆ. ಅವ್ಯವಹಾರ ಆಗಿರುವ ನ್ಯಾಯಬಾಹಿರವಾಗಿ ನೇಮಕಾತಿ ಪಟ್ಟಿ ಮಾಡಿರುವುದನ್ನು ತಡೆಹಿಡಿಯ ಬೇಕೆಂದು ನಾವು ಒತ್ತಾಯ ಮಾಡಿದಾಗ ಕೊನೆಯ ಪಕ್ಷ ಅದನ್ನು ಪರಾಮರ್ಶೆ ಮಾಡುತ್ತೇವೆಂದು ಇಷ್ಟಾದರೂ ಹೇಳಬೇಕಲ್ಲವೇ?

ಅಧ್ಯಕ್ಷರು : ಇದರ ಬಗ್ಗೆ ಸಂಬಂಧಪಟ್ಟ ಸಚಿವರ ಕಚೇರಿಗೆ ಹೋಗಿ ಅಲ್ಲಿ ಮಾತನಾಡಿ. ಈಗ ವಿಧೇಯಕವನ್ನು ಮುಂದಿನೆ ಮಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಸಂಬಂಧಪಟ್ಟ ಕಡತ ಇದೆ. ನೇಮಕಾತಿಯಲ್ಲಿ ತಾರತಮ್ಯವಾಗಿರುವುದನ್ನು ಸರಿಪಡಿಸುತ್ತೇವೆ ಎನ್ನುವ ವಾಗ್ದಾನವನ್ನು ಕೊಡಬೇಕು.

ಶ್ರೀ ಎಸ್.ಎಂ.ಕೃಷ್ಣ : ನನಗೆ ಬಂದಿರತಕ್ಕಂಥ ತೊಂದರೆ ಏನೆಂದರೆ ಆ ಬೆಂಚಿನಲ್ಲಿರುವವರಿಗೆ (ಬಿಜೆಪಿ) ಅನುಭವ ಇಲ್ಲ. ವಿಧಾನಸಭೆ ನಡೆಯುತ್ತಿದೆ. ಕಡತ ಇದೆಯೋ ಇಲ್ಲವೋ ಎಂದು ಹೇಳಲಿಕ್ಕೆ ಇಲ್ಲಿ ನನ್ನ ಹತ್ತಿರ ಕಡತ ಇದೆಯೇ? ನನ್ನ ಬಳಿ ಬರುವ ಕಡತಗಳಿಗೆ ಲೆಕ್ಕವಿಡಲಾಗುತ್ತದೆಯೇ?

(ಗೊಂದಲ)

ಅಧ್ಯಕ್ಷರು : ಎಲ್ಲರೂ ಒಂದೇ ಸಲಕ್ಕೆ ಮಾತನಾಡುವಾಗ ರೆಕಾರ್ಡ್ ಮಾಡಿಕೊಳ್ಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ನಾವು ಜನರಿಂದ ಮತ ಪಡೆದು ಆರಿಸಿ ಬಂದಿದ್ದೇವೆ. ಜನರು ನಮಗೆ ಮತ ಕೊಟ್ಟಿದ್ದಾರೆ . ನೀವೆಲ್ಲ 6 ಸಲ ಆರಿಸಿ ಬಂದಿರಬಹುದು. ನಿಮಗೆ ಜನರು ಓಟು ಕೊಟ್ಟು ಹೇಗೆ ಆರಿಸಿ ಬಂದಿದ್ದೀರೋ ಹಾಗೆಯೇ ನಮಗೂ ಸಹ ಓಟು ಕೊಟ್ಟು ನಾವು ಸಹ ಆರಿಸಿ ಬಂದಿದ್ದೇವೆ. ನೀವು ಆ ರೀತಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮುಖ್ಯಮಂತ್ರಿಗಳ ಹತ್ತಿರ ಇರುವ ಕಡತಗಳ ಬಗ್ಗೆ ಲೆಕ್ಕವಿಡುವುದ ಕ್ಕಾಗುವುದಿಲ್ಲ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಂತ್ರಿಮಂಡಲದಲ್ಲಿ ಇರತಕ್ಕಂಥ ಕೆಲವು ಸದಸ್ಯರುಗಳಸಂಬಂಧಿಕರನ್ನು ನೇಮಕಾತಿ ಪಟ್ಟಿಯಲ್ಲಿ ಸೇರಿಸಿಕೊಂಡಿದ್ದಾರೆ ಎನ್ನುವ ಮಹತ್ತರವಾದ ಆಪಾದನೆಯನ್ನು ಮಾನ್ಯ ಸದಸ್ಯರುಗಳು ಆಪಾದನೆ ಮಾಡಿದ್ದಾರೆ. ಈ ಪ್ರಶ್ನೆ ಇಷ್ಟೊಂದು ಮಹತ್ವದ್ದು ಆಗಿದೆ. ಕಳೆದ ಎರಡು ವರ್ಷಗಳಿಂದ ಪ್ರೋಸರ್ಸ್‌ನಲ್ಲಿರತಕ್ಕಂಥದ್ದು ಈಗ ಇದ್ದಕ್ಕಿದ್ದ ಹಾಗೆ ನೇಮಕಾತಿ ಪಟ್ಟಿ ತಯಾರಿಸಿರುವುದು ಅನುಮಾನಕ್ಕೆ ಎಡೆ ಮಾಡಿಕೊಡುತ್ತಿರುವುದರಿಂದ ದಯಮಾಡಿ ಪರಿಶೀಲನೆ ಮಾಡುತ್ತೇವೆ ಎನ್ನುವ ಭರವಸೆ ಕೊಟ್ಟರೆ ಸಾಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ರಾಮದಾಸ್ ಅವರು ಬಹಳ ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡಿದರು. ಕೆಲವೊಂದು ನೇರವಾದ ಆಪಾದನೆಯನ್ನು ಮಾಡಿದರು. ಆದರೆ ಯಾವ ರೀತಿ ಮಾತನಾಡಬೇಕು, ಯಾವ ರೀತಿ ಕೇಳಬೇಕು, ಕೇವಲ ಅನುಭವ ಆಡಳಿತದಲ್ಲಿ ಇಲ್ಲದಿರುವುದರಿಂದ ಈ ರೀತಿ ಮಾಡುತ್ತೀರಿ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳತಕ್ಕಂಥದ್ದು ಸರಿಯಲ್ಲ. ನಾವು ಇದನ್ನು ಪ್ರತಿಭಟಿಸುತ್ತೇವೆ.

(ಗೊಂದಲ)

ಅಧ್ಯಕ್ಷರು: ಈ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸಿ, ಶ್ರೀ ಅಲ್ಲಂ ವೀರಭದ್ರಪ್ಪನವರೆ ತಾವು ವಿಧೇಯಕವನ್ನು ಮಂಡನೆ ಮಾಡಿ.

(ಗೊಂದಲ)

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರು ಧರಣಿ ನಡೆಸಲು ಸದನದ ಬಾವಿಗೆ ಆಗಮಿಸಿದರು)